


**SARAYU** - Kannada Monthly Regn. No. KARKAN/2014/62363
june Vol. : 4 Issue : 1 5119/ಹೇಮಲಂಬಿ ಸಂವತ್ಸರ ಜೂನ್ 2017 ಪುಟ 4 Rs. 10/-

Postal Regn No. PTR/135/2016-18
Licensed to Post without pre-payment
License No: SK/WPP/PTR/177/2016-18

# ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ – ಫಲಿತಾಂಶ

## 2016 – 17 ನೇ ಶೈಕ್ಷಣಿಕ ವರ್ಷದ ಮಾರ್ಚ್ ತಿಂಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ.



591 ಅಂಕಗಳಿಸಿ
ಪ್ರಥಮ ಸ್ಥಾನ ಪಡೆದ
ವಿದ್ಯಾರ್ಥಿನಿ – ಸ್ಪೂರ್ತಿ

| | |
|---|---|
| A+ ಗ್ರೇಡ್ | 9 |
| A ಗ್ರೇಡ್ | 29 |
| B+ ಗ್ರೇಡ್ | 63 |
| B ಗ್ರೇಡ್ | 59 |
| C+ ಗ್ರೇಡ್ | 49 |

### A+ ಗ್ರೇಡ್‌ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ– ವಿದ್ಯಾರ್ಥಿನಿಯರು (90% ಕ್ಕಿಂತ ಹೆಚ್ಚು ಅಂಕ)



ಸುಕನ್ಯಾ ಎಸ್ ಪ್ರಭು 576



ನಿರೀಕ್ಷಾ ಕೆ 575



ದೀಕ್ಷಾ 573



ನಿವೇದಿತಾ ಎನ್ 571



ಧನ್ಯೇಶ್ ಎಸ್.ಎನ್ 569



ಹೇಮಂತ್ ಯು.ಎಸ್ 568



ಶ್ರೀಕಲಾ 566



ಸನತ್ ಕುಮಾರ್ 564

### ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆ– (N.M.M.S)



ಪ್ರದೀಪ್,



ಅಭಿಷೇಕ್,



ಸೃಜನ್ ಯು,



ವಸುಧಾ,



ಚೈತ್ರ ಪಿ,



ಪ್ರತಿಭಾ

2016–17 ಶೈಕ್ಷಣಿಕ ವರ್ಷದಲ್ಲಿ ನಡೆದ ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆ (N.M.M.S) ಯಲ್ಲಿ ಶ್ರೀರಾಮ ಪ್ರೌಢಶಾಲೆಯ ಪ್ರದೀಪ್, ಅಭಿಷೇಕ್, ಸೃಜನ್ ಯು, ವಸುಧಾ, ಚೈತ್ರ ಪಿ, ಪ್ರತಿಭಾ ವಿದ್ಯಾರ್ಥಿವೇತನಕ್ಕೆ ಆಯ್ಕೆಗೊಂಡಿರುತ್ತಾರೆ. ವಿದ್ಯಾರ್ಥಿಗಳ ಸಾಧನೆಗೆ ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿ ಅಧ್ಯಾಪಕ ವೃಂದ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ಸುಭಾಷಿತ ಮಂಜರಿ

**ಅಹೋ ಕಿಮಪಿ ಚಿತ್ರಾಣಿ**
**ಚರಿತ್ರಾಣಿ ಮಹಾತ್ಮನಾಮ್ ।**
**ಲಕ್ಷ್ಮೀಂ ತೃಣಾಯ ಮನ್ಯಂತೇ**
**ತದ್ಧರೇಣ ನಮಂತ್ಯಪಿ॥**

"ಮಹಾತ್ಮರ ನಡತೆ ನಿಜಕ್ಕೂ ಅಸಾಮಾನ್ಯವಾದದ್ದು. ಉಳಿದವರು ಕಾತರದಿಂದ ಆಶಿಸುವ ಸಂಪತ್ತನ್ನು ಅವರು ಹುಲ್ಲಿನಂತೆ ಕಾಣುತ್ತಾರೆ. ಹೇರಳ ಸಂಪತ್ತು ಹತ್ತಿರ ಬಂದಾಗಲೂ ಅವರು ನಮ್ರರಾಗಿಯೇ ಇರುತ್ತಾರೆ, ಸ್ವಭಾವದಿಂದ ವಿಚಲಿತರಾಗುವುದಿಲ್ಲ."

**ಆತ್ಮೀಯ ಓದುಗರೇ,**

**2017–18ನೇ ಶೈಕ್ಷಣಿಕ ವರ್ಷ ಮೊದಲ್ಗೊಂಡಿದೆ. ಒಂದೆಡೆ ಬಿರುಬಿಸಿಲಿನಿಂದ ಬಳಲಿದ್ದ ಇಳೆ ಮಳೆಯಿಂದ ತಂಪಾದರೆ, ಇನ್ನೊಂದೆಡೆ ಬೇಸಗೆಯ ವಿರಾಮದ ದಿನಗಳಿಂದ ಸ್ತಬ್ದಗೊಂಡಿದ್ದ ಶಾಲಾ ಚಟುವಟಿಕೆಗಳು ಮತ್ತೆ ಆರಂಭಗೊಂಡಿದೆ. ಈ ವರ್ಷದಲ್ಲಿ ಪ್ರಾಥಮಿಕ ಶಾಲಾ ವಿಭಾಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 1000 ಮೀರಿದೆ. ಇನ್ನುಳಿದಂತೆ ಎಲ್ಲಾ ಅಂಕಿ ಅಂಶಗಳೊಂದಿಗೆ ಜುಲೈ ಸಂಚಿಕೆಯಲ್ಲಿ ಭೇಟಿಯಾಗೋಣ**

**ವಂದನೆಗಳು**

**ಸಂಪಾದಕ ಬಳಗ**


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಕಾವ್ಯ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು




### ಶಾಲಾ ಪ್ರಾರಂಭೋತ್ಸವ

2017–18ನೇ ಶೈಕ್ಷಣಿಕ ವರ್ಷದ ಮೊದಲ ದಿನವಾದ 29.05.2017ರಂದು ವೇದವ್ಯಾಸ ಧ್ಯಾನಮಂದಿರದಲ್ಲಿ ಹೊಸದಾಗಿ ಶಾಲೆಗೆ ಸೇರಿದ ಮಕ್ಕಳಿಗೆ ಹಾಗೂ ಎಲ್ಲಾ ಮಕ್ಕಳಿಗೆ ಮಾತಾಜಿಯವರು ಆರತಿ ಮಾಡಿ ತಿಲಕವಿಟ್ಟು, ಅಕ್ಷತೆಹಾಕಿ ಸಿಹಿ ತಿನ್ನಿಸಿ ಈ ವರ್ಷದ ವಿದ್ಯಾಭ್ಯಾಸವು ಉತ್ತಮವಾಗಿ ಸಾಗಲಿ ಎಂದು ಹಾರೈಸಿ ಸ್ವಾಗತಿಸಿದರು.



### ಅಂಬೇಡ್ಕರ್ ಜಯಂತಿ

ಜಗತ್ತಿನ ಶೋಷಿತ, ದಲಿತ, ಹಿಂದುಳಿದ ವರ್ಗದ ಜನರ ಆಶಾಕಿರಣ ಡಾ। ಬಿ.ಆರ್ ಅಂಬೇಡ್ಕರ್. ಅಸ್ಪೃಶ್ಯ ಜನತೆಯ ಪರವಾಗಿ ಹೋರಾಟ ನಡೆಸಿ, ಸಮಾಜದಲ್ಲಿನ ಅಸ್ಪೃಶ್ಯತೆಯ ಕೆಟ್ಟ ಪದ್ಧತಿಯನ್ನು ಬೇರು ಸಮೇತ ಕಿತ್ತೊಗೆಯಲು ಪ್ರಯತ್ನಿಸಿದ ಮಹಾನ್ ಪುರುಷರಾಗಿದ್ದಾರೆ ಎಂದು ಶ್ರೀರಾಮ ಪ್ರೌಢಶಾಲೆಯ ಶ್ರೀ ರಾಧಾಕೃಷ್ಣ ಅಡ್ಯಂತಾಯ ದೈ.ಶಿ.ಶಿಕ್ಷಕರು ತಿಳಿಸಿದರು. ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆದ ಡಾ। ಬಿ.ಆರ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ವಹಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು ಕಾರ್ಯಕ್ರಮದಲ್ಲಿ ಕೋಟಿ ವೃಕ್ಷ ಯೋಜನೆಯ ಪ್ರಯುಕ್ತ ಗಿಡ ನೆಡುವ ಪ್ರಾತ್ಯಕ್ಷಿಕೆಯನ್ನು ಸಹಶಿಕ್ಷಕಿ ಶ್ರೀಮತಿ ಗಾಯತ್ರಿ ಮಾತಾಜಿ ನಡೆಸಿಕೊಟ್ಟರು.



### ಆರಂಭೋತ್ಸವ ಕಾರ್ಯಕ್ರಮ

ದಿ:30.05.2017

ಭಾರತೀಯ ಸಾಂಪ್ರದಾಯಿಕ ಆಚರಣೆಯು ವೈಜ್ಞಾನಿಕ ಅಂಶದಿಂದ ಕೂಡಿದೆ. ಭಾರತೀಯ ಮೂಲವಿಚಾರಧಾರೆಗಳ ಮೂಲಕ ಶಿಕ್ಷಣವನ್ನು ನಮ್ಮ ವಿದ್ಯಾ-ಕೇಂದ್ರ ನೀಡುತ್ತಿದೆ. ಆ ಮೂಲಕ ವಿದ್ಯಾರ್ಥಿಗಳ ಪರಿಪೂರ್ಣ ವಿಕಾಸದ ಕಾರ್ಯ ನಡೆಸುತ್ತಿದೆ ಎಂದು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವರವರು ಶ್ರೀರಾಮ ಪ್ರೌಢಶಾಲಾ ವಿಭಾಗದಲ್ಲಿ ನಡೆದ ಪ್ರೌಢಶಾಲಾ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಎನ್ ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆಗೈದು, ಹಿರಿಯರಿಂದ ತಿಲಕಧಾರಣೆ ಹಾಗೂ ಆಶೀರ್ವಾದ ಪಡೆದರು.

ಕಾರ್ಯಕ್ರಮವನ್ನು ಶ್ರೀಮತಿ ಸೌಮ್ಯ ಪಿ ಮಾತಾಜಿ ನಿರೂಪಿಸಿ, ಸ್ವಾಗತಿಸಿ, ಶಿಕ್ಷಕ ಶ್ರೀ ಪ್ರಶಾಂತ್ ವಂದಿಸಿದರು.

### ಉಪನ್ಯಾಸಕರ ಕಾರ್ಯಾಗಾರ ಮೇ 4, 5 2017

ಶ್ರೀರಾಮ ಪದವಿಪೂರ್ವ ವಿಭಾಗದಲ್ಲಿ ವಿವೇಕಾನಂದ ಪ.ಪೂ ಕಾಲೇಜಿನ ಉಪನ್ಯಾಸಕರಿಗಾಗಿ ಎರಡು ದಿನದ ಕಾರ್ಯಾಗಾರ ನಡೆಯಿತು. ಬೋಧನೆಯ ಜೊತೆಗೆ ಮೈಗೂಡಿಸಿಕೊಳ್ಳಬೇಕಾದ ಇತರ ನಡವಳಿಕೆಯ ಭಾಗಗಳು ಹಾಗೂ ಸಂಸ್ಕಾರಯುತ ಮೌಲ್ಯಶಿಕ್ಷಣದ ಬಗೆಗೆ ಹಿರಿಯರು ಮಾರ್ಗದರ್ಶನ ಮಾಡಿದರು.

ಚಿಂತನರಶ್ಮಿ

## ಋಜುವರ್ತನೆ

ಜಗತ್ತಿನ ಉಳಿದೆಷ್ಟೋ ವ್ಯವಹಾರಗಳಲ್ಲಿರುವಂತೆ ಹಣದ ವಿಷಯದಲ್ಲಿಯೂ ಸಾತ್ತ್ವಿಕ-ರಾಜಸ-ತಾಮಸ ದೃಷ್ಟಿಭೇದಗಳನ್ನು ಗುರುತಿಸಬಹುದು. ವ್ಯಕ್ತಿಯ ಮಾನಸಿಕ ದೌರ್ಬಲ್ಯವನ್ನು ಉತ್ತೇಜಿಸಬಲ್ಲ ಒಂದು ಪ್ರಬಲ ಶಕ್ತಿ ಹಣ. ವ್ಯಾಪಾರ ಧರ್ಮವು ನೀತಿಯನ್ನು ಮೀರಿದ್ದು ಎಂಬ ಮಂಡನೆಯೂ ಅಪರೂಪವಲ್ಲ. ಆದರೆ ಈ ದೌರ್ಬಲ್ಯವನ್ನು ಮೀರಿದ ಉದಾತ್ತ ವ್ಯಕ್ತಿಗಳ ನಿದರ್ಶನಗಳೂ ಉಂಟು.

ಗುಜರಾತಿನ ಕಛ್ ಪ್ರಾಂತದ ಪಟ್ಟಣವೊಂದರಲ್ಲಿ ಓರ್ವ ದೊಡ್ಡ ಜವಳಿ ವ್ಯಾಪಾರಿ ಇದ್ದರು. ಆ ಭಾಗದಲ್ಲಿ ಅತಿ ಹೆಚ್ಚು ವಹಿವಾಟು ಇದ್ದ ಅವರು ತಮ್ಮ ಋಜುವರ್ತನೆಗೂ ಹೆಸರಾಗಿದ್ದರು. ವಿದೇಶಗಳಿಂದ ಆಗಾಗ ಅವರು ವ್ಯಾಪಾರಕ್ಕಾಗಿ ಬಗೆಬಗೆಯ ಬಟ್ಟೆ ಸೀರೆ ಉಡುಪುಗಳನ್ನು ತರಿಸಿಕೊಳ್ಳುತ್ತಿದ್ದರು. ಒಮ್ಮೆ ಅವರು ವಿದೇಶದಲ್ಲಿ ಖರೀದಿಸಿದ್ದ ಒಂದು ದೊಡ್ಡ ಪ್ರಮಾಣದ ವಸ್ತ್ರರಾಶಿ ಜಹಜಿನಲ್ಲಿ ರೇವಿಗೆ ಬಂದಿದ್ದಿತು. ಆದರೆ ಏನೋ ಕಾರಣದಿಂದ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳು ಬಂದಿರಲಿಲ್ಲ. ಸರಕಿಗೆ ಬಹಳ ಬೇಡಿಕೆಯಿತ್ತು. ಆದ್ದರಿಂದ ಅವರು ತಮ್ಮ ಗುಮಾಸ್ತನನ್ನು ಕರೆದು ಸುಂಕದ ಕಚೇರಿಗೆ ಹೋಗಿ ಸಂದರ್ಭ ತಿಳಿಸಿ ಸುಂಕಪಾವತಿ ಮಾಡಿ ಸರಕನ್ನು ಬಿಡಿಸಿಕೊಂಡು ಬರಲು ಹೇಳಿದರು. ಗುಮಾಸ್ತ ಹೋದ. ವ್ಯಾಪಾರಿ ಮಹಾಶಯರ ಬಗ್ಗೆ ಅಧಿಕಾರಿಗಳಿಗೆಲ್ಲ ಅತ್ಯಂತ ವಿಶ್ವಾಸ-ಗೌರವಗಳಿದ್ದ ಕಾರಣ ಅವರು ಕೂಡಲೆ ಸರಕನ್ನು ಬಿಡುಗಡೆ ಮಾಡಿದರು. ಗುಮಾಸ್ತ ಹಿಂದಿರುಗಿದ.

ಯಜಮಾನರು ಪರಿಶೀಲಿಸತೊಡಗಿದಾಗ ಇರಬೇಕಾದುದಕ್ಕಿಂತ ಕಡಮೆ ತೆರಿಗೆ ಪಾವತಿಯಾಗಿದ್ದುದನ್ನು ಗಮನಿಸಿದರು. ಕೂಡಲೆ ಗುಮಾಸ್ತನನ್ನು ಕರೆದು ವಿಚಾರಿಸಿದರು. ಗುಮಾಸ್ತನು ನೂಲಿನ ಬಟ್ಟೆಗಳಿಗೆ ಸಲ್ಲುವ ದರದಲ್ಲಿ ಸುಂಕ ಪಾವತಿ ಮಾಡಿದ್ದ; ಆದರೆ ಜಹಜಿನಲ್ಲಿ ಬಂದಿದ್ದ ಬಟ್ಟೆಗಳು ರೇಷ್ಮೆಯವು. ತಾನು ಹಾಗೆ ಹಣ ಉಳಿತಾಯ ಮಾಡಿದುದನ್ನು ಯಜಮಾನರು ಮೆಚ್ಚಿಯಾರೆಂದು ನಿರೀಕ್ಷಿಸಿದ್ದ, ಗುಮಾಸ್ತ. ಆದರೆ ಯಜಮಾನರು ದುಃಖಿತರಾದರು. ಗುಮಾಸ್ತೆಗೆ ಹೇಳಿದರು. "ಅಪ್ರಾಮಾಣಿಕ ವರ್ತನೆಗೆ ನಮ್ಮ ಸಂಸ್ಥೆಯಲ್ಲಿ ಅವಕಾಶವಿಲ್ಲ. ನೀವು ಮತ್ತೆ ಹೀಗೆ ಮಾಡಿದರೆ ಕೆಲಸದಿಂದ ನಿಮ್ಮನ್ನು ತೆಗೆಯಬೇಕಾಗುತ್ತದೆ." ಹೀಗೆ ಹೇಳಿ ಅವರು ತಾವೇ ಖುದ್ದು ಸುಂಕದ ಕಚೇರಿಗೆ ಹೋಗಿ ತಮ್ಮ ಕಡೆಯಿಂದ ಆಗಿದ್ದ ಲೋಪಕ್ಕಾಗಿ ಕ್ಷಮೆ ಕೋರಿ ಸಲ್ಲಬೇಕಾಗಿದ್ದ ಹೆಚ್ಚುವರಿ ಸುಂಕ ಸಲ್ಲಿಸಿದರು. ಅವರ ಪ್ರಾಮಾಣಿಕತೆಗೆ ಸುಂಕದ ಕಚೇರಿಯ ಆಗಿನ ಆಂಗ್ಲಾಧಿಕಾರಿಗಳು ಬೆರಗಾದರು.

---

ಬುತ್ತಿ

## ಉತ್ತರ ದಿಕ್ಕಿನತ್ತ.......

ಮನೆಯಲ್ಲಿ ಯಾರಾದರೂ ಉತ್ತರದಿಕ್ಕಿಗೆ ತಲೆ ಹಾಕಿ ಮಲಗಿದರೆ ಹಿರಿಯರು ಹೇಳುವುದಿದೆ- 'ಆ ದಿಕ್ಕಿಗೆ ತಲೆ ಹಾಕಿ ಮಲಗಬೇಡ. ಆಯಸ್ಸು ಕ್ಷೀಣಿಸುತ್ತದೆ' ಎಂದು. ನಮ್ಮ ಶರರಿರದಲ್ಲಿಯ ಕಾಂತಿಶಕ್ತಿ ಹಾಗೂ ಉತ್ತರದಿಕ್ಕಿನ ಕಾಂತಶಕ್ತಿಯ ಧ್ರುವಗಳೆರಡೂ ಒಂದೇ ಆಗುವುದರಿಂದ ಅವು ಪರಸ್ಪರ ವಿಕರ್ಷಣೆಗೊಳಪಡುವುದರಿಂದ ನಮ್ಮ ಶರೀರದಲ್ಲಿ ಅನಾರೋಗ್ಯವೇ ಮೊದಲಾದ ವಿಕಾರಗಳುಂಟಾಗುವ ಸಂಭವವಿರುವುದರಿಂದ ಹೀಗೆ ಹೇಳುವುದು ರೂಢಿ. ವಿಜ್ಞಾನವನ್ನು ಒಂದಿಷ್ಟು  ಓದಿಕೊಂಡವರಿಗೆ ಇದು ತಿಳಿದಿರುವ ವಿಷಯವೇ ಆದ್ದರಿಂದ ಇದರ ಬಗ್ಗೆ ಹೆಚ್ಚಿನ ವಿವರಣೆ ಇಲ್ಲಿ ನೀಡುವುದಿಲ್ಲ. ಆದರೆ ಇದಕ್ಕೆ ಸಂಬಂಧಿಸಿದ ಇನ್ನೂ ಕೆಲವು ಸಂಗತಿಗಳು ತುಂಬ ಕುತೂಹಲಕಾರಿಯಾಗಿವೆ.

ಹಸು, ಜಿಂಕೆ ಮುಂತಾದ ಸಾಕುಪ್ರಾಣಿಗಳು ಯಾವುದೇ ಅಡೆತಡೆಯಿಲ್ಲದ ಸನ್ನಿವೇಶದಲ್ಲಿ ಹುಲ್ಲು ಮೇಯುವಾಗ ಅವುಗಳ ಮುಖ ಯಾವಾಗಲೂ ದಕ್ಷಿಣೋತ್ತರದಲ್ಲಿರುತ್ತದೆ. ಹೆಚ್ಚಿನ ಶಕ್ತಿ ಹರಿಯುವ ವಿದ್ಯುತ್ ಪ್ರವಾಹವೇನಾದರೂ ಹತ್ತಿರವಿದ್ದಾಗ ಅವುಗಳ ಮುಖ ಬೇರೆ ಬೇರೆ ದಿಕ್ಕಿಗೆ ಆಗಬಹುದಾಗಿವೆ. ಅವುಗಳ ಮೂಗಿನಲ್ಲಿ ಸೂಕ್ಷ್ಮರೂಪದಲ್ಲಿ ಕಾಂತಶಕ್ತಿಯಿರುವುದರಿಂದ ಹೈವೋಲ್ಟ್ ಇರುವ ವಿದ್ಯುತ್ ಪ್ರವಾಹವೇನಾದರೂ ಹತ್ತಿರವಿದ್ದಾಗ ಅವುಗಳ ಮುಖ ಬೇರೆ ಬೇರೆ ದಿಕ್ಕಿಗೆ ಆಗಬಹುದಾಗಿವೆ. ಅವುಗಳ ಮೂಗಿನಲ್ಲಿ ಸೂಕ್ಷ್ಮರೂಪದಲ್ಲಿ ಕಾಂತಶಕ್ತಿಯಿರುವುದರಿಂದ ಹೈವೋಲ್ಟ್ ಇರುವ ವಿದ್ಯುಚ್ಛಕ್ತಿಯ ಸಂಪರ್ಕ ಬಂದಾಗ ವಿಕರ್ಷಣೆಯುಂಟಾಗಿ ಅವುಗಳ ಮೇಯುವ ದಿಕ್ಕಿನಲ್ಲಿ ಬದಲಾವಣೆಯಾಗುತ್ತದೆನ್ನುತ್ತದೆ ವಿಜ್ಞಾನ.

ಇನ್ನೊಂದು ವಿಶೇಷವೆಂದರೆ ದಕ್ಷಿಣಾಭಿಮುಖವಾಗಿರುವ ಎಲ್ಲ ಭೂಭಾಗಗಳ ಮೂಲೆ ಚಿಕ್ಕದಾಗಿರುತ್ತದೆ. ಆದ್ದರಿಂದಲೇ ಭಾರತದ ದಕ್ಷಿಣ ತುದಿ ಚೂಪಾಗಿದೆ. ಇದೇ ರೀತಿ ಉಳಿದ ದಕ್ಷಿಣಾಭಿಮುಖ ಭೂಭಾಗಗಳದ್ದೂ ಕೂಡ. ವಿಶಾಲತೆಯಿರುವುದೆಲ್ಲ ಉತ್ತರದೆಡೆಗೇ.

ಉತ್ತರ ದಿಕ್ಕು ಉಪವಾಸಕ್ಕೆ ಹೆಚ್ಚು ಪ್ರಶಸ್ತ. ಸೀತೆಯನ್ನು ಹುಡುಕಹೊರಟ ಹನುಮಂತ ಆಕೆ ಸಿಕ್ಕದೇ ದಿಕ್ಕೆಟ್ಟು ಪ್ರಾಯೋಪವೇಶನವ್ರತ ಕೈಗೊಂಡು ಕುಳಿತುಕೊಳ್ಳುವುದು ಉತ್ತರದಿಕ್ಕಿಗೇ ಮುಖ ಮಾಡಿಯೇ, ಮಹಾಭಾರತದಲ್ಲಿ ಪಾಂಡವರ ಮಹಾಪ್ರಸ್ಥಾನವೂ ಉತ್ತರಾಭಿಮುಖವಾಗಿಯೇ, ಹಲವು ಪವಿತ್ರ ನದಿಗಳ ಹುಟ್ಟು ಉತ್ತರಭಾಗದಲ್ಲಿಯೇ. ಧ್ರುವನಕ್ಷತ್ರ, ಸಪ್ತರ್ಷಿಮಂಡಲ ಮುಂತಾದವಿರುವುದು ಉತ್ತರಕ್ಕೇ, ಭೂಮಿಯ ಅಕ್ಷಾಗ್ರವು ಉತ್ತರಾಭಿಮುಖವಾಗಿ ಸಾಗುತ್ತದೆ. 26000 ವರ್ಷಗಳಲ್ಲಿ ಇದರ ಒಂದು ಪರಿಕ್ರಮಣ ಪೂರ್ಣಗೊಳ್ಳುತ್ತದೆ. ವಿವಿಧ ಸಂಸ್ಕೃತಿಗಳ ಉಗಮವಾದುದೂ ಉತ್ತರದಿಕ್ಕಿಗೇ.

ಹೀಗೆ ಉತ್ತರದಿಕ್ಕಿನ ಕಾಂತಶಕ್ತಿಗೆ ವಿಶೇಷ ಮಹತ್ವವಿದೆ. 'ಉತ್ತರದೆಡೆಗೆ ತಲೆ ಹಾಕಿ ಮಲಗಬೇಡಿರೆಂದು ಹೇಳುತ್ತ ನಮ್ಮ ಹಿರಿಯರು ಹಿರಿದಾದ ತತ್ತ್ವವೊಂದನ್ನು ಅದರಲ್ಲಿ ಅಡಕವಾಗಿಸಿದ್ದಾರೆನ್ನಿಸುತ್ತದೆ.

